**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುದ್ದೇಬಿಹಾಳ**

**ಸಿ.ಸಿ. ನಂ– 24/2023**

**C.W.5, P.W.2**

| | | |
|---|---|---|
| ಹೆಸರು | : | ಮಲ್ಲಪ್ಪ ತಂ ಬಸಪ್ಪ ಹೊಸಮನಿ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಅಬಕಾರಿ ಉಪನಿರೀಕ್ಷಕರು, ಅಬಕಾರಿ ವಲಯ |
| ವಾಸಸ್ಥಳ | : | ಮುದ್ದೇಬಿಹಾಳ. |

ದಿನಾಂಕಃ 17.07.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದ .**

ನಾನು ಸನ್ 2022 ರಿಂದ 2025 ರವರೆಗೆ ಮುದ್ದೇಬಿಹಾಳ ಅಬಕಾರಿ ವಲಯದಲ್ಲಿ ಅಬಕಾರಿ ಉಪನಿರೀಕ್ಷಕನಾಗಿ ಅಂತಾ ಕರ್ತವ್ಯ ನಿರ್ವಹಿಸುತ್ತೇನೆ.

ದಿಃ 01.12.2022 ರಂದು ಚಾ.ಸಾ 1 ರವರಿಂದ ಈ ಪ್ರಕರಣದ ಕಡತವನ್ನು ಸ್ವೀಕರಿಸಿ ಪರಿಶೀಲಿಸಿರುತ್ತೇನೆ. ಅದೇ ದಿನ ದಾಳಿ ಕಾಲಕ್ಕೆ ಹಾಜರಿದ್ದ ಚಾಸಾ–2 ಮತ್ತು 3 ರವರ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ. ದಿ.25.1.2023 ರಂದು ಈ ಪ್ರಕರಣದಲ್ಲಿ ಕಾಯ್ದಿರಿಸಿದ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಚಾಸಾ 3 ರವರ ಮೂಲಕ ಕಳುಹಿಸಿರುತ್ತೇನೆ. ದಿ. 26.1.2023 ರಂದು ಚಾಸಾ 3 ರವರು ರಾಸಾಯನಿಕ ಪರೀಕ್ಷಾ ವರದಿ ಮತ್ತು ಮಾದರಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 3

ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ. 17.01.2023 ರಂದು ಆರ್.ಟಿ.ಓ ಯಾದಗಿರಿಯರವರಿಗೆ ವಾಹನದ ಬಿ ಎಕ್ಸಟ್ರ್ಯಾಕ್ಟ್ ನೀಡುವಂತೆ ಪತ್ರದ ಮೂಲಕ ಕೊಂಡಿದ್ದೆ. ದಿ. 24.01.2023 ಎಂದು ಆರ್‌ಟಿ.ಓ ಯಾದಗಿರಿಯವರು ಬಿ ಎಕ್ಸಟ್ರ್ಯಾಕ್ಟ್ ನೀಡಿದ್ದು, ಕಡತದಲ್ಲಿ ಅಳವಡಿಸಿಕೊಂಡಿದ್ದೇನೆ. ದಿ. 26.01.2023 ರಂದು ಅಬಕಾರಿ ಉಪ ಆಯುಕ್ತರಿಗೆ ಅಮಾನತ್ತು ಪಡಿಸಿಕೊಂಡ ವಾಹನ ಮತ್ತು ಮುಮಾಲನ್ನು ಮುಟ್ಟುಗೋಲು ಹಾಕಿಕೊಳ್ಳಲು ಮೇಲಾಧಿಕಾರಿಗಳಿಗೆ ಪತ್ರದ ಮೂಲಕ ನಿವೇದಿಸಿಕೊಂಡಿದ್ದೇನೆ. ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿಯ ವಿರುದ್ದ ಸಾಕಷ್ಟು ಸಾಕ್ಷ್ಯಾಧಾರ ಕಂಡು ಬಂದಿರುವುದರಿಂದ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ರಾಸಾಯನಿಕ ಪರೀಕ್ಷಕರಿಗೆ ಬರೆದ ಪತ್ರವನ್ನು ನಿಪಿ–7 ಎಂದು ಸಾಕ್ಷಿ ಸಹಿಯನ್ನು ನಿಪಿ–7(ಎ) ಎಂದು, ರಾಸಾಯನಿಕ ವರದಿಯನ್ನು ನೋಡುತ್ತಿದ್ದು ನಿಪಿ–8 ಎಂದು, ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು, ಆರ್.ಟಿ.ಓ ಯಾದಗಿರಿಯವರಿಗೆ ಬರೆದ ಪತ್ರವನ್ನು ಈಗ ನೋಡುತ್ತಿದ್ದು ನಿಪಿ–9 ಮತ್ತು ಸಾಕ್ಷಿಯ ಸಹಿಯನ್ನು ನಿಪಿ–9(ಎ) ಎಂದು, ಬಿ ಎಕ್ಸಟ್ರ್ಯಾಕ್ಟನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ– 10 ಎಂದು ಸಾಕ್ಷಿ ಸಹಿಯನ್ನು ನಿಪಿ– 10(ಎ) ಎಂದು, ಮೇಲಾಧಿಕಾರಿಗಳಿಗೆ ಬರೆದ ಪತ್ರವನ್ನು ನಿಪಿ– 11 ಎಂದು ಸಾಕ್ಷಿ ಸಹಿಯನ್ನು ನಿಪಿ– 11(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲುಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ ಒಟ್ಟಾಗಿ ಮು.ಮಾ 1 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ ಶ್ರೀ. ಕೆ.ಎಚ್.ಸಿ ವಕೀಲರಿಂದ ಆರೋಪಿ ಪರವಾಗಿ**

ಚಾಸಾ–1 ನನ್ನ ಸಹೋದ್ಯೋಗಿ ಎಂದರೆ ಸರಿ. ಚಾಸಾ–2 ಮತ್ತು 3 ರವರ ಹೇಳಿಕೆಯ ಹೊರತಾಗಿ ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಸ್ಥಳಿಯರು ತಮ್ಮ ಹೇಳಿಕೆ ಕೊಡಲು ನಿರಾಕರಿಸಿರುತ್ತಾರೆ. ಮುಮಾ–1 ಸರ್ಕಾರದಿಂದ ಮಾನ್ಯತೆ ಪಡೆದವು ಎಂದರೆ ಸರಿ. ಅವು ಮದ್ಯದ ಅಂಗಡಿಗಳಲ್ಲಿ ದೊರೆಯುತ್ತವೆ ಎಂದರೆ ಸರಿ. ಮುಮಾ–1 ರಂತಹ ಟೆಟ್ರಾ ಪ್ಯಾಕೆಟ್‌ಗಳು ಬೇರೆ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿದ್ದು, ನಮ್ಮ ಕಛೇರಿಯಲ್ಲಿ ಲಭ್ಯವಿರುತ್ತವೆ ಎಂದರೆ ಸರಿಯಲ್ಲ. ರಾಸಾಯನಿಕ ವಿಶ್ಲೇಶಣಾ ವರದಿಯಲ್ಲಿ ಪರೀಕ್ಷೆಗಾಗಿ ಕಳುಹಿಸಿಕೊಟ್ಟ ದಿನಾಂಕ 25.11.2022 ಎಂದು ನಮೂದು ಇದೆ ಎಂದರೆ ಸಾಕ್ಷಿ ಸ್ವತಃ ನುಡಿಯುವುದೇನೆಂದರೆ ಬೆರಳಚ್ಚಿನ ಪ್ರಮಾದ ಉಂಟಾಗಿರಬಹುದು. ಮುಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2 ನೇ ಆರೋಪಿ ಮುದ್ದೇಬಿಹಾಳಕ್ಕೆ ಬಂದಾಗ ಅನಾವಶ್ಯಕವಾಗಿ ಈ ಪ್ರಕರಣದಲ್ಲಿ ಸೇರ್ಪಡೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಮುಮಾಲಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಚಾಸಾ–1 ರವರು ಮಾಡಿದ ಸುಳ್ಳು ಪ್ರಕರಣಕ್ಕೆ ಅನುಕೂಲವಾಗಲೆಂದು ಸುಳ್ಳು ಅಂತಿಮ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ.